

ದಟ್ಟ ಕಾಡಿನ ನಡುವೆ ಹರಿಯುತ್ತಿರುವ ಕಾಳಿಯ ಜಲಮುಖ

## ಕಾನ್ಸೆಪ್ಟ್ ಬೇಸ್ಡ್ ಟೂರಿಸಂ

ಸಾಂಪ್ರದಾಯಿಕ ಊಟ, ವಸತಿ, ಉಪಚಾರದಾಚೆಗೆ ಜೋಯಿಡಾದಲ್ಲಿ ಕಾನ್ಸೆಪ್ಟ್ ಬೇಸ್ಡ್ ಟೂರಿಸಂ ಕೂಡ ಬೆಳೆಯುತ್ತಿದೆ. ಇದಕ್ಕೆ ಉತ್ತಮ ಉದಾಹರಣೆ ಜೋಯಿಡಾ ತಾಲೂಕು ಕೇಂದ್ರದಿಂದ ಸ್ವಲ್ಪವೇ ದೂರ ಇರುವ ಹನಿಪಾರ್ಕ್! ಕಾಡುಮನೆ, ಹಕ್ಕಿಮನೆ ಎಂಬೆರಡು ಪ್ರಸಿದ್ಧ ಹೋಂ ಸ್ಟೇ ನಡೆಸುತ್ತಿರುವ ನರಸಿಂಹ ಭಟ್ ಅವರ ಕನಸಿನ ಕೂಸು. ವಿಶ್ವದ ನಾನಾ ಪ್ರದೇಶಗಳಲ್ಲಿರುವ ವಿಶಿಷ್ಟ ಪ್ರಭೇಧಗಳ ಜೇನುಗಳನ್ನು ಇಲ್ಲಿ ಕಾಣಬಹುದು. ತಾಜಾ ಜೇನು ತುಪ್ಪ ಸವಿಯಬಹುದು. ಅಷ್ಟೇ ಅಲ್ಲ, ಜೇನು ಸಾಕುವ ಆಸಕ್ತಿ ಇದ್ದರೆ ಕಲಿಸಿಕೊಡುತ್ತಾರೆ ಕೂಡ. ಹಾರ್ನ್‌ಬಿಲ್ ರೆಸಾರ್ಟ್ – ಕಾಳಿ ನದಿಯ ಪಕ್ಕದಲ್ಲೇ ಇರುವ ಇನ್ನೊಂದು ಚೆಂದ ಜಾಗ. ನದಿಯಂಚಿನ ಎತ್ತರದ ಮರಗಳಲ್ಲಿ ಬಂದು ಕೂರುವ ನೂರಾರು ಹಾರ್ನ್‌ಬಿಲ್‌ಗಳನ್ನು ನೋಡುವುದೇ ಕಣ್ಣಿಗೆ ಹಬ್ಬ. ವನ್ಯಜೀವಿ ಫೋಟೊಗ್ರಾಫರ್‌ಗಳು ಮತ್ತು ಪಕ್ಷಿ ಫೋಟೊಗ್ರಾಫರ್ ಸಲುವಾಗಿಯೇ ವಿಶೇಷವಾದ ಸ್ಥಳವೊಂದು ಸಿದ್ಧವಾಗುತ್ತಿದೆ.

ಪುಟಾಣಿ ಊರನ್ನು ಸೃಷ್ಟಿಸಿದೆ. ಜೋರು ಮಳೆಗಾಲದಲ್ಲಿ ಡ್ಯಾಂನ ಗೇಟು ತೆಗೆಯುತ್ತಾರೆ. ಧುಮ್ಮಿಕ್ಕುವ ನೀರಿನ ರಭಸ ನೋಡುವುದೇ ಸೊಗಸು. ಹಿನ್ನೀರಿನ ಅಗಾಧ ಸೊಬಗನ್ನೂ ಆಸ್ವಾದಿಸಬಹುದು.

## ಸಿಂಥೇರಿ ರಾಕ್ಸ್

ದಟ್ಟ ಕಾಡಿನ ಮಧ್ಯೆ ಕಡಿದಾದ ಕಣಿವೆಯಲ್ಲಿರುವ ಸಿಂಥೇರಿ ರಾಕ್ಸ್ ನಿರ್ಮಾಣವಾಗಿದ್ದು ಲಕ್ಷಾಂತರ ವರ್ಷಗಳ ಹಿಂದೆ ಸಂಭವಿಸಿದ ಜ್ವಾಲಾಮುಖಿ ಸ್ಫೋಟದಿಂದ. ಇದು ಜೋಯಿಡಾದ ಇನ್ನೊಂದು ಪ್ರಸಿದ್ಧ ಪ್ರವಾಸೀ ಆಕರ್ಷಣೆ. ಗೋಡೆಯಂತಹ ಹೆಬ್ಬಂಡೆ, ಜುಳು ಜುಳು ಹರಿಯುವ ಪುಟ್ಟ ತೊರೆ, ಬಂಡೆಗುಂಟ ಇರುವ ಜೇನುಗೂಡುಗಳು ಇಲ್ಲಿನ ಪ್ರಮುಖ ಆಕರ್ಷಣೆಗಳು.

ದೂರ: ದಾಂಡೇಲಿ ಬಸ್ ನಿಲ್ದಾಣದಿಂದ ಕೇವಲ 2 ಕಿ.ಮೀ.

## ಮೊಸಳೆ ಪಾರ್ಕ್

ಸರ್ಕಾರದ ಅಧೀನದಲ್ಲಿರುವ ಮೊಸಳೆ ಪಾರ್ಕ್ ದಾಂಡೇಲಿಯ ಪ್ರಮುಖ ಆಕರ್ಷಣೆ. ದಾಂಡೇಲಿಯಿಂದ ಕೇವಲ ಮೂರು ಕಿ.ಮೀ. ಅಂತರದಲ್ಲಿದೆ. ಮೊಸಳೆಗಳನ್ನು ನೋಡುವುದರ ಜೊತೆಗೆ ವಿಹಾರಕ್ಕೂ ಹೇಳಿ ಮಾಡಿಸಿದ ಜಾಗ ಇದು.

## ಆತಿಥ್ಯ ಎಲ್ಲಿ?

ಪ್ರವಾಸಿಗರ ಅನುಕೂಲದ ದೃಷ್ಟಿಯಿಂದ ಜೋಯಿಡಾ, ದಾಂಡೇಲಿ ಎರಡೂ ಕಡೆಗಳಲ್ಲಿ 50ಕ್ಕೂ ಹೆಚ್ಚು ಹೋಂ ಸ್ಟೇ, ರೆಸಾರ್ಟುಗಳಿವೆ. ಪ್ರವಾಸಿ ತಾಣಗಳದ್ದೊಂದು ಹದವಾದರೆ ಇಲ್ಲಿನ ಊಟ ಉಪಚಾರ ವಸತಿಗಳದ್ದೇ ಇನ್ನೊಂದು ಹದ. ಇವತ್ತಿಗೂ ಜೋಯಿಡಾದ 'ಕಾಡುಮನೆ' ಹೋಂ ಸ್ಟೇಯ ವೆಲ್‌ಕಮ್ ಡ್ರಿಂಕಿನ ಸ್ವಾದ ನಾಲಿಗೆ ತುದಿಯಲ್ಲಿದೆ. ಹೊಟ್ಟೆ ತುಂಬಾ ಊಟ, ರುಚಿ ಜೊತೆಗೆ ಶುಚಿ. ಸ್ಥಳೀಯ ವಿಶೇಷಗಳಾದ ತಂಬುಳಿ, ಅಪ್ಪೆಹುಳಿ ಹಾಗೂ ಹಲವು ಹತ್ತೆಂಟು ಬಗೆಯ ತಿನಿಸುಗಳು ಪ್ರವಾಸಿಗರ ನಾಲಿಗೆ ಚಪಲ ತಣಿಸುತ್ತವೆ. ಹರ್ಬಲ್ ಸ್ನಾನ, ಹಬೆಸ್ನಾನ ಹಾಗೂ ಆರೋಗ್ಯಕ್ಕೆ ಉಪಯುಕ್ತವಾದ ಪೇಯಗಳು ಪ್ರವಾಸಿಗರ ನೆನೆಪಿನ ಬುತ್ತಿ ಸೇರುತ್ತವೆ. ಉತ್ತಮ ಆತಿಥ್ಯಕ್ಕೆ ಹೆಸರಾದವುಗಳೆಂದರೆ, ದಾಂಡೇಲಿಯಿಂದ 12 ಕಿ.ಮೀ. ದೂರದಲ್ಲಿರುವ ಹಕ್ಕಿಮನೆ, ಕಾಡುಮನೆ (ನರಸಿಂಹ ಭಟ್: 9480085707), ಪಣಸೋಲಿಯಲ್ಲಿರುವ ದಾಂಡೇಲಿ ಕಾಳಿ ಜಂಗಲ್ ಸ್ಟೇ (ರಾಹುಲ್: 9845301361) ಪ್ರಸಿದ್ಧವಾದ ವಸತಿ ಕಲ್ಪಿಸುವ ತಾಣಗಳಾಗಿವೆ. ಹೋಂ ಸ್ಟೇಗಳಲ್ಲಿ ವಸತಿಯ ವ್ಯವಸ್ಥೆ ಅಷ್ಟೇ ಅಲ್ಲದೆ ನಿಮ್ಮ ಸುತ್ತಾಟದ ಯೋಜನೆಗಳನ್ನೂ ಹಾಕಿಕೊಡುತ್ತಾರೆ. (ಹೆಚ್ಚಿನ ವಿವರಗಳಿಗಾಗಿ: 8762329546)